ಆ) ಹಾಗಿದ್ದಲ್ಲಿ, ಅವುಗಳನ್ನು ಕೆಡವಿ ಬದಲೀ ಸೇತುವೆಗಳನ್ನು ಯಾವಾಗ ನಿರ್ಮಾಣ ಮಾಡಲಾಗುವುದು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ತಿಳಿದಿದೆ.

ಆ) ಈ ಕಾಮಗಾರಿಗಳ ಅಗತ್ಯತೆಯನ್ನು ಗಮನದಲ್ಲಿರಿಸಿಕೊಂಡು, ಆಯವ್ಯಯದಲ್ಲಿ ಅಥವಾ ಯಾವುದಾದರೂ ಯೋಜನೆಯಡಿ ಸೇರಿಸಿ ಮಂಜೂರಾದೊಡನೆ ಮತ್ತು ಅನುದಾನದ ಹಣವು ಲಭ್ಯವಾದ ಕೂಡಲೇ ಪುನರ್ ನಿರ್ಮಾಣ ಕೆಲಸವನ್ನು ಹಂತ ಹಂತವಾಗಿ ಕ್ರಮ ಕೈಗೊಳ್ಳಲು ಯೋಜಿಸಲಾಗಿದೆ.

ವಿಷಯ : ಮಹಾಲಕ್ಷ್ಮೀ ಲೇಔಟ್ ಎರಡನೆಯ ಹಂತದಲ್ಲಿ ಬೀದಿ ದೀಪ

Q : 439

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಹಾಲಕ್ಷ್ಮೀ ಲೇಔಟ್ ಎರಡನೆಯ ಹಂತ ಮತ್ತು ಕಿರ್ಲೋಸ್ಕರ್ ಫೌಂಡ್ರಿ ಸ್ಲಮ್‌ಗೆ ಬೀದಿ ದೀಪ ಹಾಕಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಎಷ್ಟು ಹಣ ತುಂಬಿರುವುದು?

ಆ) ಮೆಲ್ಕಂಡ ಕೆಲಸಕ್ಕೆ ತುಂಬಿ ಎಷ್ಟು ದಿವಸವಾಯಿತು?

ಇ) ಮೇಲ್ಕಂಡ ಬಡಾವಣೆಗಳಿಗೆ ಬೀದಿ ದೀಪ ಹಾಕಲಾಗಿದೆಯೆ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಮಹಾಲಕ್ಷ್ಮಿ ಲೇಔಟ್ ಎರಡನೆಯ ಹಂತಕ್ಕೆ ರೂ. 3,83,970 ಮತ್ತು ಕಿರ್ಲೋಸ್ಕರ್ ಫೌಂಡ್ರಿ ಸ್ಲಮ್‌ಗೆ ರೂ. 48,80,720 ಹಣವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮಂಡಳಿಗೆ ಸಹಾಯ ಮಾಡಿದೆ.

ಆ) ಮಹಾಲಕ್ಷ್ಮಿ ಲೇಔಟ್ ಎರಡನೇ ಹಂತದ ಬೀದಿ ದೀಪದ ಕೆಲಸಗಳಿಗೆ ಹಣ ತುಂಬಿ ಸುಮಾರು ಎರಡು ವರ್ಷ ಮತ್ತು ಕಿರ್ಲೋಸ್ಕರ್ ಫೌಂಡ್ರಿ ಸ್ಲಮ್ ಬೀದಿ ದೀಪದ ಕೆಲಸಗಳಿಗೆ ಹಣ ತುಂಬಿ ಕೇವಲ ಒಂದು ತಿಂಗಳು ಸಂದಿದೆ.

ಇ) ಮಹಾಲಕ್ಷ್ಮಿ ಲೇಔಟ್ ಎರಡನೇ ಹಂತದ ಲೈನ್ ಕೆಲಸಗಳು ಮುಗಿದಿದ್ದು ಸದ್ಯದಲ್ಲೇ ವಿದ್ಯುತ್ ಸರಬರಾಜನ್ನು ವ್ಯವಸ್ಥೆ ಮಾಡಲಾಗುವುದು. ಕಿರ್ಲೋಸ್ಕರ್ ಫೌಂಡ್ರಿ ಸ್ಲಮ್‌ನ ಕೆಲಸಗಳನ್ನು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದ್ದು, ಆದಷ್ಟು ಜಾಗ್ರತೆ ಕೆಲಸವನ್ನು ಮುಗಿಸಲಾಗುವುದು.

ವಿಷಯ : ರಾಜಾಜಿನಗರ 6ನೇ ಬ್ಲಾಕ್‌ನಲ್ಲಿರುವ ಸರ್ಕಾರಿ ವಸತಿ ಗೃಹಗಳಿಂದ ಬರುವ ವರಮಾನ.

Q : 171

ಶ್ರೀ ಕೆ. ಲಕ್ಕಣ್ಣ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ

ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜಾಜಿನಗರ 6ನೇ ಬ್ಲಾಕ್‌ನಲ್ಲಿರುವ ಸರ್ಕಾರಿ ವಸತಿ ಗೃಹಗಳಿಂದ ಪ್ರತಿ ವರ್ಷವೂ ಬರುವ ವರಮಾನವೆಷ್ಟು?
ಆ) ಆ ವಸತಿ ಗೃಹಗಳಿಗೆ ಪ್ರತಿ ವರ್ಷವೂ ಖರ್ಚು ಮಾಡುತ್ತಿರುವ ಹಣ ವೆಷ್ಟು?
ಇ) ಆ ವಸತಿ ಗೃಹಗಳಿಂದ ಬರುವ ವರಮಾನಕ್ಕಿಂತ ಹೆಚ್ಚಿಗೆ ಹಣ ಖರ್ಚಾಗುತ್ತಿದೆಯೆ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :
ಅ) ಮತ್ತು ಆ)
ಈ ವಸತಿ ಗೃಹವನ್ನು 1967ರಲ್ಲಿ ಒಟ್ಟು 23.72 ಲಕ್ಷ ರೂ.ಗಳಿಂದ ನಿರ್ಮಿಸಲಾಗಿದ್ದು, ಇತ್ತೀಚಿನ ಮೂರು ವರ್ಷಗಳ ಆದಾಯ ಮತ್ತು ವೆಚ್ಚಿನ ವಿವರಗಳನ್ನು ನೀಡಲಾಗಿದೆ.

ಸಾಲು	ಆದಾಯ	ಖರ್ಚು
1990-91	7.34 ಲಕ್ಷ ರೂ.	1.49 ಲಕ್ಷ ರೂ.
1991-92	6.951 "	5.82 "
1992-93 (ಫೆಬ್ರವರಿ 93ರ ಅಂತ್ಯದವರೆಗೆ)	6.71 "	5.33 "

ಇ) ಇಲ್ಲ.

ವಿಷಯ : ಬೆಳಗಾವಿ ಜಿಲ್ಲೆಯಲ್ಲಿ ಬರುವ ಏತ ನೀರಾವರಿ ಯೋಜನೆಗಳ ಸಂಖ್ಯೆ.

Q : 453
ಶ್ರೀ ಉಮೇಶ ಎ. ಕತ್ತಿ (ಹುಕ್ಕೇರಿ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯಲ್ಲಿ ಬರುವ ಏತ ನೀರಾವರಿ ಯೋಜನೆಗಳು ಎಷ್ಟು ಹಾಗೂ ಅವು ಯಾವುವು ;
ಆ) ಜಿಲ್ಲೆಯಲ್ಲಿ ಮಂಜೂರಾದ ಏತ ನೀರಾವರಿ ಯೋಜನೆಗಳು ಎಷ್ಟು ಹಾಗೂ ಇನ್ನೂ ಮಂಜೂರಾಗಬೇಕಾದ ಯೋಜನೆಗಳೆಷ್ಟು?
ಇ) ಅವುಗಳ ಅಂದಾಜು ಪತ್ರಿಕೆಗಳು ಸರ್ಕಾರಕ್ಕೆ ಬಂದಿದೆಯೇ ಹಾಗೂ ಮಂಜೂರಾದ ಯೋಜನೆಗಳು ಯಾವಾಗ ಪೂರ್ಣಗೊಳ್ಳುವುವು?

ಡಾ॥ ಆರ್. ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :
ಅ) ಬೆಳಗಾವಿ ಜಿಲ್ಲೆಯಲ್ಲಿ ಬರುವ ಒಟ್ಟು ಏತ ನೀರಾವರಿ ಯೋಜನೆಗಳು 61 (ವಿವರಗಳನ್ನು ಅನುಬಂಧದಲ್ಲಿ ನೀಡಿದೆ).
ಆ) ಮಂಜೂರಾದ ಏತ ನೀರಾವರಿ ಯೋಜನೆಗಳು 25 (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ) ಇನ್ನೂ ಮಂಜೂರಾಗಬೇಕಾದ ಯೋಜನೆಗಳು 36(ವಿವರಗಳನ್ನು ಅನುಬಂಧದಲ್ಲಿ ನೀಡಿದೆ).
ಇ) ಇನ್ನೂ ಮಂಜೂರಾಗಬೇಕಾಗಿರುವ 36 ಯೋಜನೆಗಳಲ್ಲಿ ಕೇವಲ ಒಂದು (ಸಲಾಮವಾಡಿ) ಯೋಜನೆಯ ಅಂದಾಜು ಪತ್ರಿಕೆ ಮಾತ್ರ ಸರ್ಕಾರಕ್ಕೆ